ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

# 2020ರ ಸೆಪ್ಟೆಂಬರ್ 08ರಂದು ನಡೆದ ಪ್ರಶಿಕ್ಷಣ ಪರಿಷತ್ 28ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ 28ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಸೆಪ್ಟೆಂಬರ್ 08, 2020ರ ಮಂಗಳವಾರ ಮಧ್ಯಾಹ್ನ 12.30** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ವಿ. ಗಿರೀಶ್‌ಚಂದ್ರ**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ವಿದ್ವಾನ್ ಎಚ್ ಸತ್ಯನಾರಾಯಣ ರಾವ್**, ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |
| ೩. | **ವಿದ್ವಾನ್ ಎಸ್.ಎಸ್ ನಿರಂಜನಮೂರ್ತಿ**, ಪ್ರಾಚಾರ್ಯರು, ಸಿದ್ಧಗಂಗಾ ಮಠ | ಸದಸ್ಯರು |
| ೪. | **ಡಾ. ಎನ್. ಲಕ್ಷ್ಮೀನಾರಾಯಣ ಭಟ್ಟ**, ಪ್ರಾಚಾರ್ಯರು, ಉಡುಪಿ | ಸದಸ್ಯರು |
| ೫. | **ಡಾ. ಕೆ. ಎಮ್ ಮಹದೇವಯ್ಯ**, ಪ್ರಾಚಾರ್ಯರು, ಮೈಸೂರು | ಸದಸ್ಯರು |
| ೬. | **ಪ್ರೊ., ಬಿ.ವಿ ವೆಂಕಟರಮಣ ಡೀನ್**, ಶಾಸ್ತ್ರ ನಿಕಾಯ | ಸದಸ್ಯರು |
| ೭. | **ಪ್ರೊ. ವೀರನಾರಾಯಣ ಎನ್.ಕೆ ಪಾಂಡುರಂಗಿ**, ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | | |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಅಧಿನಿಯಮ-2009(ತಿದ್ದುಪಡಿ) ಅನುಮೋದಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಅಧಿನಿಯಮ-2009ರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದ್ದು ಈ ತಿದ್ದುಪಡಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಬೇಕಾಗಿದೆ. ಇದನ್ನು ಪ್ರಶಿಕ್ಷಣ ಪರಿಷತ್ತಿನ ಗಮನಕ್ಕೆ ತರುತ್ತಾ ಸಭೆಯ ಅನುಮೋದನೆಗೆ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಅಧಿನಿಯಮ-2009ರಲ್ಲಿ ಕುಲಪತಿಗಳಾಗುವವರು ಸಂಸ್ಕೃತ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸಿರಲೇಬೇಕು ಎಂದು ಬದಲಾವಣೆ ಮಾಡಲು ಸೂಚಿಸಿದೆ. ಉಳಿದಂತೆ ವಿಷಯವನ್ನು ಒಪ್ಪಲಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆ ಪಡೆದ ನಂತರ ಸರ್ಕಾರಕ್ಕೆ ಸಲ್ಲಿಸಲು ತಿಳಿಸಿದೆ.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ಪರಿಷ್ಕೃತ ಪರಿನಿಯಮಕ್ಕೆ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ನಡೆಯುತ್ತಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ಪರಿಷ್ಕೃತ ಪರಿನಿಯಮಕ್ಕೆ ಪ್ರಶಿಕ್ಷಣ ಪರಿಷತ್ತಿನಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಈ ಪರಿಷ್ಕೃತ ಪರಿನಿಯಮವನ್ನು ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ಪರಿಷ್ಕೃತ ಪರಿನಿಯಮಕ್ಕೆ ಕೆಲವು ಬದಲಾವಣೆಗಳೊಂದಿಗೆ ಪ್ರಶಿಕ್ಷಣ ಪರಿಷತ್ತಿನಲ್ಲಿ ಅನುಮೋದನೆ ನೀಡಲಾಗಿದೆ. ಪ್ರಶಾಸನ ಸಮಿತಿಯಲ್ಲಿ ವಿಸ್ತೃತವಾಗಿ ಚರ್ಚಿಸಿ, ಅನುಮೋದನೆ ಪಡೆದ ನಂತರ ಸರ್ಕಾರಕ್ಕೆ ಸಲ್ಲಿಸಲು ತಿಳಿಸಿದೆ.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಪಿಎಚ್.ಡಿ – ವಿದ್ಯಾವಾರಿಧಿ ಪದವಿಗೆ ಮಾರ್ಗದರ್ಶಕರನ್ನು ನಿಯೋಜಿಸಲು ಅನುಮತಿಯನ್ನು ನೀಡುವ ಬಗೆಗೆ**<br>2019–20ನೇ ಸಾಲಿನಲ್ಲಿ 'ಸಂಶೋಧನ ಪದವಿಗೆ ಮಾರ್ಗದರ್ಶಕರಾಗಲು ಆವೇದನೆ ಸಲ್ಲಿಸಿದ ಅಭ್ಯರ್ಥಿಗಳ ಅರ್ಹತೆಯನ್ನು ಪರಿಶೀಲಿಸುವ ನಿಮಿತ್ತ ಸಂಬಂಧಿತ ಅಧ್ಯಯನ ಮಂಡಳಿಗಳ ಸಭೆಯನ್ನು ಕರೆಯಲಾಗಿತ್ತು. ಆವೇದನೆ ಸಲ್ಲಿಸಿದ ಅಭ್ಯರ್ಥಿಗಳ ಆವೇದನಾಪತ್ರಗಳನ್ನು ಪರಿಶೀಲಿಸಿ, ಕೆಳಕಂಡ ಅಭ್ಯರ್ಥಿಗಳಿಗೆ ಸಂಶೋಧನ ಪದವಿಗಳಿಗೆ ಮಾರ್ಗದರ್ಶಕರಾಗಲು ಸಂಪೂರ್ಣ ಅರ್ಹತೆ ಇದೆಯೆಂದು ಸಭೆಯು ಶಿಫಾರಸ್ಸು ಮಾಡಿರುತ್ತದೆ. ಅಲಂಕಾರ ವಿಭಾಗದಲ್ಲಿ ಡಾ. ಮಂಜುನಾಥ ಭಟ್‌ರವರನ್ನು, ವ್ಯಾಕರಣ ವಿಭಾಗದಲ್ಲಿ ಎಂ. ತಿಲಕ್ ರಾವ್ ಹಾಗೂ ವ್ಯಾಕರಣ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ರಾಮಕೃಷ್ಣ ಭಟ್‌ರವರನ್ನು, ನ್ಯಾಯ ವಿಭಾಗದಲ್ಲಿ ಕೆ.ಇ. |

| | | |
|---|---|---|
| | | ಶ್ರೀವೆಂಕಟನಾಥನ್‌ರವರನ್ನು, ಭಾಷೆ ಮತ್ತು ಸಾಹಿತ್ಯ ವಿಭಾಗದಲ್ಲಿ ಎಂ. ಜಯರೇವಣ್ಣ ರವರನ್ನು ಭಾಷೆ ಮತ್ತು ಸಾಹಿತ್ಯ ವಿಭಾಗ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಎಸ್. ಪ್ರಭುಸ್ವಾಮಿಯವರನ್ನು ಸಂಶೋದನ ಮಾರ್ಗದರ್ಶಕರನ್ನಾಗಿ ಆಯ್ಕೆ ಮಾಡಿದೆ. ಈ ವಿಷಯವನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | ಅಲಂಕಾರ ವಿಭಾಗದಲ್ಲಿ ಡಾ. ಮಂಜುನಾಥ ಭಟ್‌ರವರನ್ನು, ವ್ಯಾಕರಣ ವಿಭಾಗದಲ್ಲಿ ಎಂ. ತಿಲಕ್ ರಾವ್ ಹಾಗೂ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ರಾಮಕೃಷ್ಣ ಭಟ್‌ರವರನ್ನು, ನ್ಯಾಯ ವಿಭಾಗದಲ್ಲಿ ಕೆ.ಇ. ಶ್ರೀವೆಂಕಟನಾಥನ್‌ರವರನ್ನು, ಭಾಷೆ ಮತ್ತು ಸಾಹಿತ್ಯ ವಿಭಾಗದಲ್ಲಿ ಎಂ. ಜಯರೇವಣ್ಣರವರನ್ನು ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಎಸ್. ಪ್ರಭುಸ್ವಾಮಿಯವರನ್ನು ಸಂಶೋಧನ ಮಾರ್ಗದರ್ಶಕರನ್ನಾಗಿ ಆಯ್ಕೆ ಮಾಡಿರುವುದನ್ನು ಸಭೆಯು ಅನುಮೋದಿಸಿತು. |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | ಸಂಶೋಧನ ಮಾರ್ಗದರ್ಶಕರನ್ನು ಇತರ ಶಾಸ್ತ್ರಗಳ ವಿಭಾಗದಲ್ಲಿ ನಿಯೋಜಿಸುವ ಬಗೆಗೆ.<br>ವಿಶ್ವವಿದ್ಯಾಲಯದಲ್ಲಿ ಸಂಶೋಧನ ಮಾರ್ಗದರ್ಶಕರನ್ನು ವಿವಿಧ ವಿಷಯಗಳಲ್ಲಿ ನಿಗದಿಗೊಳಿಸಿ ನಿಯೋಜಿಸಲಾಗಿದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಸಂಶೋಧನ ಮಾರ್ಗದರ್ಶಕರನ್ನು ಅವರು ಪರಿಣತಿ ಹೊಂದಿದ ಇತರ ಶಾಸ್ತ್ರಗಳಲ್ಲಿಯೂ ನಿಯೋಜನೆ ಮಾಡಬೇಕಾದಾಗ ಆಯಾ ನಿಕಾಯಾಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಅನುಮತಿ ನೀಡಬಹುದಾಗಿದೆ. ಈ ವಿಷಯಕ್ಕೆ ಸಭೆಯಲ್ಲಿ ಅನುಮೋದನೆ ಕೋರಿದೆ. |
| | ನಿರ್ಣಯ | ವಿಶ್ವವಿದ್ಯಾಲಯದಲ್ಲಿ ಈಗಾಗಲೇ ನಿಗದಿಯಾದ ವಿಷಯಗಳಿಗೆ ಮಾತ್ರ ಮಾರ್ಗದರ್ಶಕರನ್ನಾಗಿಯಲ್ಲದೇ ಪರಿಣತಿ ಇರುವ ಇನ್ನಿತರ ವಿಷಯಗಳಲ್ಲಿಯೂ ನಿಕಾಯಾಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಸಂಶೋಧನ ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಅನುಮತಿ ನೀಡಲಾಗಿದೆ. |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | ಪಿಎಚ್.ಡಿ – ವಿದ್ಯಾವಾರಿಧಿ ತರಗತಿಯಲ್ಲಿ 2019ನೇ ಸಾಲಿನಲ್ಲಿ ಶುಲ್ಕವನ್ನು ಪಾವತಿಸುವ ವಿದ್ಯಾರ್ಥಿಗಳಿಗೆ ದಂಡ ಶುಲ್ಕದಿಂದ ವಿನಾಯಿತಿಯನ್ನು ನೀಡುವ ಬಗೆಗೆ.<br>2019–20ನೇ ಸಾಲಿನಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಸಮಸ್ಯೆಯಿಂದ ಹಲವು ವಿದ್ಯಾರ್ಥಿಗಳಿಗೆ ಹಣಕಾಸಿನ ವಿಷಯದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರಣ ವಾರ್ಷಿಕ ಶುಲ್ಕ ಪಾವತಿಗೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಸದರಿ ವರ್ಷದಲ್ಲಿ ಶುಲ್ಕವನ್ನು ಪಾವತಿಸುವಾಗ ಇತರ ವರ್ಷಗಳ ದಂಡ ಶುಲ್ಕದಲ್ಲಿ ವಿನಾಯಿತಿ ನೀಡಬಹುದಾಗಿದೆ. ಈ ಬಗ್ಗೆ ಸಭೆಯಲ್ಲಿ ಅನುಮೋದನೆ ಕೋರಿದೆ. |
| | ನಿರ್ಣಯ | ಪಿಎಚ್.ಡಿ – ವಿದ್ಯಾವಾರಿಧಿ ವಾರ್ಷಿಕ ಶುಲ್ಕ ಪಾವತಿಗೆ ಇತರ ವರ್ಷಗಳ ದಂಡ ಶುಲ್ಕದಲ್ಲಿ ಕೋವಿಡ್ ಅವಧಿಯಲ್ಲಿ ಮಾತ್ರ ವಿನಾಯಿತಿ ನೀಡಬಹುದಾಗಿದೆ. ತದನಂತರ ದಂಡಸಹಿತ ಶುಲ್ಕವನ್ನೇ ಪಾವತಿ ಮಾಡಬೇಕಿರುತ್ತದೆ ಎಂದು ಸಭೆಯು ತೀರ್ಮಾನಿಸಿತು. |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | 2020–21 ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸುಗಳನ್ನು ಆರಂಭಿಸುವ ಬಗೆಗೆ.<br>ವಿಶ್ವವಿದ್ಯಾಲಯದ 1. ವೇದಾಂತ ವಿಭಾಗದ ವತಿಯಿಂದ a) Kashmir Shaivism 2. ನ್ಯಾಯ ವೈಶೇಷಿಕ ವಿಭಾಗದ ವತಿಯಿಂದ Indian Epistemology with special emphasis on Inference. 3. ವ್ಯಾಕರಣ ವಿಭಾಗದ ವತಿಯಿಂದ a) Pythonskrit (python for Sanskrit) b)English through Sanskrit c) Introduction to Ashtadhyayee ಮುಂತಾದ ಅಲ್ಪಾವಧಿ ಕೋರ್ಸುಗಳ ತರಗತಿಗಳನ್ನು ಆರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ದಿನಾಂಕ 25.08.2020ರಂದು ನಡೆದ ನಿಕಾಯಾಧ್ಯಕ್ಷರುಗಳ ಸಭೆಯಲ್ಲಿ ಈ ಅಲ್ಪಾವಧಿ ಕೋರ್ಸುಗಳನ್ನು ಆರಂಭಿಸಬಹುದು ಎಂಬ ನಿರ್ಣಯಿಸಿ ನಡಾವಳಿಯ ಪ್ರತಿಯನ್ನು ಮಾನ್ಯ ಕುಲಪತಿಗಳಿಗೆ ಸಲ್ಲಿಸಲಾಗಿತ್ತು. ಮಾನ್ಯ ಕುಲಪತಿಗಳು ಈ ಕೆಳಕಂಡ ಅಂಶಗಳನ್ನು ಪಾಲಿಸಲು ಸೂಚಿಸಿ ಕೋರ್ಸುಗಳನ್ನು ಆರಂಭಿಸಲು ಒಪ್ಪಿಗೆಯನ್ನು ಸೂಚಿಸಿರುತ್ತಾರೆ.<br>ಈ ಅಲ್ಪಾವಧಿ ಕೋರ್ಸುಗಳನ್ನು Online mode ನಲ್ಲಿಯೂ ನಡೆಸಬಹುದಾಗಿದೆ. ಲಿಖಿತ ಪರೀಕ್ಷೆ ಇಲ್ಲದಿರುವ ಕಾರಣ ಆಂತರಿಕ ಮೌಲ್ಯಮಾಪನದ ಮುಖಾಂತರ ವಿದ್ಯಾಥಿಗಳಿಗೆ ಪರೀಕ್ಷೆಯನ್ನು ನಡೆಸಿ ಎ. ಬಿ. ಸಿ. ಶ್ರೇಣಿಯನ್ನು ನೀಡತಕ್ಕದ್ದು. ಈ ಕೋರ್ಸ್‌ಗೆ ಪ್ರತಿ ವಿದ್ಯಾರ್ಥಿಗೆ 3000 ರೂ. ಶುಲ್ಕ ನಿಗದಿ ಮಾಡಲಾಗಿದೆ. ಈ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತಾ ಈ ಕೋರ್ಸ್ ಗಳನ್ನು ಆರಂಭಿಸಲು ಸಭೆಯ ಅನುಮತಿಗಾಗಿ ಮಂಡಿಸಿದೆ. |
| | ನಿರ್ಣಯ | ವೇದಾಂತ ವಿಭಾಗದ ವತಿಯಿಂದ **a) Kashmir Shaivism** ಮತ್ತು ದ್ವೈತ ವೇದಾಂತ, ನ್ಯಾಯ ವೈಶೇಷಿಕ ವಿಭಾಗದ ವತಿಯಿಂದ **Indian Epistemology with special emphasis on Inference.** ವ್ಯಾಕರಣ ವಿಭಾಗದ ವತಿಯಿಂದ **a) Pythonskrit (python for Sanskrit) b)English through Sanskrit c) Introduction to Ashtadhyayee** ಈ ಅಲ್ಪಾವಧಿ ಕೋರ್ಸುಗಳ ತರಗತಿಗಳನ್ನು ಆರಂಭಿಸಲು ಸಭೆಯು ಒಪ್ಪಿದೆ. |
| ವಿಷಯ 07 | ವಿಷಯ ಮತ್ತು | ವಿಶ್ವವಿದ್ಯಾಲಯದ ಅಲ್ಪಾವಧಿ ಕೋರ್ಸ್‌ಗಳ ಪ್ರಮಾಣಪತ್ರದ ಪ್ರಾರೂಪ ನಿಗದಿಪಡಿಸುವ ಬಗೆಗೆ.<br>2020–21ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳ ವತಿಯಿಂದ ಅಲ್ಪಾವಧಿಯ ಕೋರ್ಸ್‌ಗಳನ್ನು |

| | | |
|---|---|---|
| | ಟಿಪ್ಪಣಿ | ನಡೆಸಲಾಗುತ್ತಿದೆ. ಈ ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೀಡಬಹುದಾದ ಪ್ರಮಾಣಪತ್ರದ ಪ್ರಾರೂಪವನ್ನು ಸಿದ್ಧಪಡಿಸಿ ಪ್ರತಿಯನ್ನು ಲಗತ್ತುಗಳಲ್ಲಿ ಅಡಕಗೊಳಿಸಿದೆ. ಈ ಪ್ರಮಾಣಪತ್ರದ ಪ್ರಾರೂಪವನ್ನು ಪರಿಶೀಲಿಸಲು ಮತ್ತು ಅನುಮೋದಿಸಲು ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಅಲ್ಪಾವಧಿಯ ಕೋರ್ಸ್‌ಗಳ ಪ್ರಮಾಣಪತ್ರದ ಪ್ರಾರೂಪವನ್ನು ಕೆಲವು ಬದಲಾವಣೆಗಳೊಂದಿಗೆ ಒಪ್ಪಲಾಗಿದೆ.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಅಲ್ಪಾವಧಿ ಕೋರ್ಸ್‌ಗಳ ಮತ್ತು ಸರ್ಟಿಫಿಕೇಟ್, ಡಿಪ್ಲೊಮಾ, ಪಿ.ಜಿ ಡಿಪ್ಲೊಮಾ ಕೋರ್ಸ್‌ಗಳ ಆದಾಯವನ್ನು ಆಯಾ ವಿಭಾಗದ ಶೈಕ್ಷಣಿಕ ಚಟುವಟಿಕೆಗಳಿಗೆ ಉಪಯೋಗಿಸುವ ಬಗೆಗೆ.**<br>ವಿವಿಧ ವಿಭಾಗಗಳ ಅಡಿಯಲ್ಲಿ ವಿಶೇಷ ವಿಷಯಗಳನ್ನು ಬೋಧಿಸಲು ಅಲ್ಪಾವಧಿ ಕೋರ್ಸ್ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಇದನ್ನು ಪ್ರಧಾನವಾಗಿ ವಿಶ್ವವಿದ್ಯಾಲಯದ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೂಪಿಸಲಾಗಿದೆ. ಇದಕ್ಕಾಗಿ ವಿಭಾಗಗಳ ಅಧ್ಯಾಪಕರ ವಿಶೇಷ ಶ್ರಮ ಅವಶ್ಯವಿರುತ್ತದೆ. ಆದಕಾರಣ ಈ ಕಾರ್ಯಕ್ರಮಗಳಿಂದ ಗಳಿಸಿದ ಹಣವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಪರಿಗಣಿಸಿ ಆಯಾ ವಿಭಾಗಗಳಿಂದ ಗಳಿಸಿರುವ ಹಣವನ್ನು ವಿಭಾಗಾಧ್ಯಕ್ಷರ ಶಿಫಾರಸ್ಸಿನಂತೆ ಆಯಾ ವಿಭಾಗದ ಶೈಕ್ಷಣಿಕ ಚಟುವಟಿಕೆಗಳಿಗಾಗಿ ಉದಾ: ವಿಚಾರ ಸಂಕಿರಣ, ಕಾರ್ಯಶಾಲೆ, ವಿಶೇಷೋಪನ್ಯಾಸ ಮುಂತಾದವುಗಳಿಗಾಗಿ ಬಳಸಿಕೊಳ್ಳಲು ಅನುಮತಿ ನೀಡಬಹುದಾಗಿದೆ. ವಿಭಾಗೀಯ ಆಡಳಿತಾತ್ಮಕ ವಿಷಯಗಳಾದ –ಅಧ್ಯಯನ ಮಂಡಳಿ ಸಭೆ.. ಮುಂತಾದವುಗಳಿಗೆ ಈ ಮೊತ್ತವನ್ನು ಬಳಸಿಕೊಳ್ಳಲಾಗುವುದಿಲ್ಲ. ಈ ವಿಷಯವನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸಿದೆ. |
| | ನಿರ್ಣಯ | **ಅಲ್ಪಾವಧಿ ಕೋರ್ಸ್‌ಗಳ ಮತ್ತು ಸರ್ಟಿಫಿಕೇಟ್, ಡಿಪ್ಲೊಮಾ, ಪಿ.ಜಿ ಡಿಪ್ಲೊಮಾ ಕೋರ್ಸ್‌ಗಳ ಆದಾಯವನ್ನು ಕುಲಪತಿಗಳ ಶಿಫಾರಸ್ಸಿನ ಮೇರೆಗೆ ಎಲ್ಲಾ ವಿಭಾಗಗಳ ವಿಚಾರ ಸಂಕಿರಣ, ಕಾರ್ಯಶಾಲೆ, ವಿಶೇಷೋಪನ್ಯಾಸ ಮುಂತಾದವುಗಳಿಗಾಗಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ವೇದಾಂತ ವಿಭಾಗದ ಅಡಿಯಲ್ಲಿ ಅದ್ವೈತ ವೇದಾಂತ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ಬಗೆಗೆ**<br>2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೇದಾಂತ ನಿಕಾಯದ ಅಡಿಯಲ್ಲಿ ಅದ್ವೈತವೇದಾಂತ ಸರ್ಟಿಫಿಕೇಟ್ ಕೋರ್ಸಿನ ತರಗತಿಗಳನ್ನು ಆರಂಭಿಸುವ ಕುರಿತು ವಿಶ್ವವಿದ್ಯಾಲಯದ ವೇದಾಂತ ವಿಭಾಗದ ವತಿಯಿಂದ ಅದ್ವೈತವೇದಾಂತ ಸರ್ಟಿಫಿಕೇಟ್ ಕೋರ್ಸನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಟಿಫಿಕೇಟ್ ಕೋರ್ಸಿನ ತರಗತಿಯನ್ನು ಪ್ರಾರಂಭಿಸಲು ಅಧ್ಯಯನ ಮಂಡಳಿಯ ಸಭೆಯು ಸೂಚಿಸಿದ ಅಭಿಪ್ರಾಯದ ಕ್ರೋಢೀಕೃತ ವಿಷಯಗಳು ಈ ಕೆಳಕಂಡಂತಿವೆ.<br>1. ಕೋರ್ಸಿನ ಅವಧಿ – 6 ತಿಂಗಳು. ವಾರಕ್ಕೆ 6 ದಿನಗಳು.<br>2. ಅರ್ಹತೆ – ಪಿ.ಯು.ಸಿ. ಅಥವಾ ತತ್ಸಮಾನ ತರಗತಿ.<br>3. ಅದ್ವೈತವೇದಾಂತ ಸರ್ಟಿಫಿಕೇಟ್ ಕೋರ್ಸಿನ ತರಗತಿಗಳಿಗೆ ಈ ಕೆಳಕಂಡ ಪಾಠ್ಯವನ್ನು ಅಳವಡಿಸಿಕೊಳ್ಳಬಹುದು.<br>ಒಟ್ಟೂ ಎರಡು ಪತ್ರಿಕೆಗಳು –.<br>1ನೇ ಪತ್ರಿಕೆ – ಪ್ರಕರಣ ಗ್ರಂಥ – ವಿವೇಕ ಚೂಡಾಮಣಿ.ಮೂಲಮಾತ್ರ.<br>(ಆಧಾರಗ್ರಂಥ – ಚಂದ್ರಶೇಖರಭಾರತಿಗಳ ವ್ಯಾಖ್ಯಾನ)<br>2 ನೇ ಪತ್ರಿಕೆ – ಉಪನಿಷತ್ತು – ಛಾಂದೋಗ್ಯೋಪನಿಷತ್ – 6ನೇ ಅಧ್ಯಾಯ(ಶಂಕರಭಾಷ್ಯ ಸಹಿತ) |
| | ನಿರ್ಣಯ | **ವೇದಾಂತ ನಿಕಾಯದ ಅಡಿಯಲ್ಲಿ ಅದ್ವೈತವೇದಾಂತ ಸರ್ಟಿಫಿಕೇಟ್ ಕೋರ್ಸಿನ ತರಗತಿಗಳನ್ನು ಆರಂಭಿಸಲು ಸಭೆಯು ಅನುಮತಿ ನೀಡಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ಶೈವಾಗಮ ಶಾಸ್ತ್ರದ ಬಿ.ಎ ಮತ್ತು ಎಂ.ಎ ತರಗತಿಗಳನ್ನು ಆರಂಭಿಸುವ ಬಗೆಗೆ.**<br>2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಾಗೂ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಬಿ.ಎ ಹಾಗೂ ಎಂ.ಎ ತರಗತಿಗಳಿಗೆ ಹಾಗೂ ವಿಶ್ವವಿದ್ಯಾಲಯದ ಶಾಸ್ತ್ರ ನಿಕಾಯದ ಅಧೀನದಲ್ಲಿ ಶೈವಾಗಮವನ್ನು ಆರಂಭಿಸಬೇಕಿರುತ್ತದೆ. ಶೈವಾಗಮಕ್ಕೆ ಸಂಬಂಧಿಸಿದಂತೆ ಪಾಠ್ಯಕ್ರಮವು ನಮ್ಮ ವಿಶ್ವವಿದ್ಯಾಲಯದಲ್ಲಿ ಇಲ್ಲದಿರುವುದರಿಂದ ಶೈವಾಗಮ ಶಾಸ್ತ್ರದ ಬಿ.ಎ ಮತ್ತು ಎಂ.ಎ ತರಗತಿಗಳ ಪಾಠ್ಯಕ್ರಮವನ್ನು ಸಿದ್ಧಪಡಿಸಲು BOS ಸಭೆ ನಡೆಸಿ ಪಾಠ್ಯಕ್ರಮ ಸಿದ್ಧಪಡಿಸಲಾಗಿದೆ. ಈ ಪಠ್ಯಕ್ರಮವನ್ನು ಅನುಮೋದಿಸಿ ಬಿ.ಎ ಹಾಗೂ ಎಂ.ಎ ತರಗತಿಗಳನ್ನು ಆರಂಭಿಸಲು ಸಭೆಯ ಅನುಮತಿ ಕೋರಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **ಶೈವಾಗಮ ಶಾಸ್ತ್ರದ ಬಿ.ಎ ಮತ್ತು ಎಂ.ಎ ತರಗತಿಗಳ ಪಾಠ್ಯಕ್ರಮವನ್ನು ಸಭೆಯು ಅನುಮೋದಿಸಿತು. ವಿಶ್ವವಿದ್ಯಾಲಯದ ಯಾವುದಾದರೂ ಸಂಯೋಜಿತ ಕಾಲೇಜುಗಳು ಈ ವಿಭಾಗವನ್ನು ತೆರೆಯುವುದಿದ್ದಲ್ಲಿ ಅದಕ್ಕೆ ಅನುಮತಿ ನೀಡಬಹುದಾಗಿದೆ ಎಂದು ಸಭೆಯು ತೀರ್ಮಾನಿಸಿದೆ.** |
| ವಿಷಯ | ವಿಷಯ ಮತ್ತು | **ಋಗ್ವೇದಭಾಷ್ಯ ಮತ್ತು ಯಜುರ್ವೇದ ಭಾಷ್ಯದ ಬಿ.ಎ ಮತ್ತು ಎಂ.ಎ ತರಗತಿಗಳನ್ನು ಆರಂಭಿಸುವ ಬಗೆಗೆ.**<br>2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಾಗೂ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಬಿ.ಎ ಹಾಗೂ ಎಂ.ಎ ತರಗತಿಗಳಿಗೆ ಹಾಗೂ ವಿಶ್ವವಿದ್ಯಾಲಯದ ವೇದ ನಿಕಾಯದ ಅಧೀನದಲ್ಲಿ |

| | | |
|---|---|---|
| 11 | ಟಿಪ್ಪಣಿ | ವೇದ ಮತ್ತು ವೇದಾಂಗ ವಿಭಾಗದಲ್ಲಿ **ಋಗ್ವೇದಭಾಷ್ಯದ ಮತ್ತು ಯಜುರ್ವೇದ ಭಾಷ್ಯದ ಬಿ.ಎ ಹಾಗೂ ಎಂ.ಎ** ತರಗತಿಗಳನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಲಾಗಿತ್ತು. ಅದಕ್ಕೆ ಸಂಬಂಧಿಸಿದ ಪಾಠ್ಯಕ್ರಮವನ್ನು ಸಿದ್ಧಪಡಿಸಲು BOS ಅನ್ನು ರಚಿಸಿ ಸಭೆಯನ್ನು ಮಾಡಿ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. **ಋಗ್ವೇದಭಾಷ್ಯದ ಮತ್ತು ಯಜುರ್ವೇದ ಭಾಷ್ಯದ ಬಿ.ಎ ಹಾಗೂ ಎಂ.ಎ** ತರಗತಿಗಳನ್ನು ಪ್ರಾರಂಭಿಸಲು ಅನುಮತಿಗಾಗಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **ಋಗ್ವೇದಭಾಷ್ಯದ ಮತ್ತು ಯಜುರ್ವೇದ ಭಾಷ್ಯದ ಬಿ.ಎ ಹಾಗೂ ಎಂ.ಎ ತರಗತಿಗಳ ಪಾಠ್ಯಕ್ರಮವನ್ನು ಸಭೆಯು ಅನುಮೋದಿಸಿತು. ವಿಶ್ವವಿದ್ಯಾಲಯದ ಯಾವುದಾದರೂ ಸಂಯೋಜಿತ ಕಾಲೇಜುಗಳು ಈ ವಿಭಾಗವನ್ನು ತೆರೆಯುವುದಿದ್ದಲ್ಲಿ ಅದಕ್ಕೆ ಅನುಮತಿ ನೀಡಬಹುದಾಗಿದೆ ಎಂದು ಸಭೆಯು ತೀರ್ಮಾನಿಸಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಮೋದಿಸುವ ಬಗೆಗೆ**<br>2020-21ನೇ ಸಾಲಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶ್ವವಿದ್ಯಾಲಯದ ಪರಿಚಾಯಿಕೆಯನ್ನು (prospectus) ಮತ್ತು ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಇದಕ್ಕೆ ಘಟನೋತ್ತರ ಅನುಮತಿಗಾಗಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **2020-21ನೇ ಸಾಲಿನ ವಾರ್ಷಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಜಾಲತಾಣದಲ್ಲಿ ಪ್ರಕಟಿಸಿದ್ದಕ್ಕೆ ಘಟನೋತ್ತರ ಅನುಮತಿ ನೀಡಲಾಗಿದೆ.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಪದವಿ ಶೈಕ್ಷಣಿಕ ಹಂತದಲ್ಲಿ ಜಾನಪದ ವಿಷಯವನ್ನು ಐಚ್ಛಿಕವಾಗಿ ಅಳವಡಿಸುವ ಬಗ್ಗೆ**<br>ದಿನಾಂಕ: 17.12.2019ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾದಂತೆ ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದ ಪದವಿ ಶೈಕ್ಷಣಿಕ ಹಂತದಲ್ಲಿ ಜಾನಪದ ವಿಷಯವನ್ನು ಐಚ್ಛಿಕವಾಗಿ ಅಳವಡಿಸಿಕೊಳ್ಳುವ ಕುರಿತು ಎಲ್ಲಾ ವಿಶ್ವವಿದ್ಯಾಲಯಗಳು, ವಿಶ್ವವಿದ್ಯಾಲಯಗಳ ಪ್ರಾಧಿಕಾರಗಳಾದ ಸಿಂಡಿಕೇಟ್, ಮತ್ತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವಾಲಯವು ನಿರ್ದೇಶನವನ್ನು ನೀಡಿತ್ತು. ಈ ಹಿನ್ನೆಲೆಯಲ್ಲಿ ಜಾನಪದ ವಿಷಯವನ್ನು ಸಂಸ್ಕೃತ ವಿದ್ಯಾರ್ಥಿಗಳಿಗೆ ಅಳವಡಿಸಿಕೊಳ್ಳುವ ವಿಷಯದ ಕುರಿತಾದಂತೆ ಸೂಕ್ತ ನಿರ್ದೇಶನಕ್ಕಾಗಿ ಸಭೆಯಲ್ಲಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **ಪದವಿ ಶೈಕ್ಷಣಿಕ ಹಂತದಲ್ಲಿ ಜಾನಪದ ವಿಷಯವನ್ನು ಐಚ್ಛಿಕವಾಗಿ ಅಳವಡಿಸುವುದನ್ನು ತಾತ್ತ್ವಿಕವಾಗಿ ಒಪ್ಪಲಾಯಿತು. ವಿಶ್ವವಿದ್ಯಾಲಯದ ಸಂಶೋಧನೆ ಮತ್ತು ಸ್ನಾತಕೋತ್ತರ ನಿರ್ದೇಶನಾಲಯದ ನಿರ್ದೇಶಕರು ಈ ಕುರಿತು ಕ್ರಮವಹಿಸುವಂತೆ ತಿಳಿಸಲಾಯಿತು.** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | ವಿಶ್ವವಿದ್ಯಾಲಯದ ಎಲ್ಲಾ ಕೋರ್ಸ್‌ಗಳ ಶುಲ್ಕವನ್ನು ಪರಿಷ್ಕರಿಸುವ ಕುರಿತು,<br>ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಥಮಾ. ಕಾವ್ಯ, ಸಾಹಿತ್ಯ, ವೇದ ಪ್ರವೇಶ, ವೇದ ಮೂಲ, ವಿದ್ವನ್ಮಧ್ಯಮಾ, ವಿದ್ವದುತ್ತಮಾ, ಬಿ.ಎ ಸಂಸ್ಕೃತ, ಎಂ.ಎ ಸಂಸ್ಕೃತ, ಸರ್ಟಿಫಿಕೇಟ್, ಡಿಪ್ಲೊಮಾ, ಎಂ.ಫಿಲ್ ಮತ್ತು ಪಿಎಚ್.ಡಿ ಕೋರ್ಸ್‌ಗಳು ನಡೆಯುತ್ತವೆ. ಈ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಶುಲ್ಕವನ್ನು ಪರಿಷ್ಕರಿಸಲು ದಿನಾಂಕ: 11.03.2020 ರಂದು ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣದಲ್ಲಿ ಶುಲ್ಕ ಪರಿಷ್ಕರಣಾ ಸಮಿತಿಯ ಮೊದಲ ಸಭೆಯನ್ನು ಕರೆಯಲಾಗಿತ್ತು. ಶುಲ್ಕ ಪರಿಷ್ಕರಣಾ ಸಮಿತಿಯು ಪರಿಷ್ಕರಿಸಿರುವ ಶುಲ್ಕಗಳ ಮೊತ್ತವನ್ನು ಪರಿಶೀಲಿಸಿ ಅನುಮೋದಿಸಲು ಸಭೆಯಲ್ಲಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಥಮಾ. ಕಾವ್ಯ, ಸಾಹಿತ್ಯ, ವೇದ ಪ್ರವೇಶ, ವೇದ ಮೂಲ, ವಿದ್ವನ್ಮಧ್ಯಮಾ, ವಿದ್ವದುತ್ತಮಾ, ಬಿ.ಎ ಸಂಸ್ಕೃತ, ಎಂ.ಎ ಸಂಸ್ಕೃತ, ಸರ್ಟಿಫಿಕೇಟ್, ಡಿಪ್ಲೊಮಾ, ಎಂ.ಫಿಲ್ ಮತ್ತು ಪಿಎಚ್.ಡಿ ಕೋರ್ಸ್‌ಗಳ ಪರಿಷ್ಕೃತ ಶುಲ್ಕವನ್ನು ಸಭೆಯು ಅನುಮೋದಿಸಿದೆ.** |
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **"Diploma in Dr. B. R Ambedkar Studies"** ತರಗತಿಗಳನ್ನು ಆರಂಭಿಸುವ ಬಗೆಗೆ.<br>2020-21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ **Diploma in Dr. B. R Ambedkar Studies** ತರಗತಿಗಳನ್ನು ಪ್ರಾರಂಭಿಸಲು ಸಂಬಂಧಿಸಿದ ಪಾಠ್ಯಕ್ರಮವನ್ನು ಸಿದ್ಧಪಡಿಸಲು ಅಧ್ಯಯನ ಮಂಡಳಿ (BOS) ವನ್ನು ರಚಿಸಿ, ಅಧ್ಯಯನ ಮಂಡಳಿಯ ಸಭೆಯನ್ನು ಮಾಡಿ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಸಂಬಂಧಪಟ್ಟ ತರಗತಿಯನ್ನು ಪ್ರಾರಂಭಿಸಲು ಅನುಮತಿಗಾಗಿ ವಿಷಯವನ್ನು ಮಂಡಿಸಲಾಗಿದೆ. |
| | ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ **Diploma in Dr. B. R Ambedkar Studies** ತರಗತಿಗಳನ್ನು ಪ್ರಾರಂಭಿಸಲು ಸಿದ್ಧಪಡಿಸಲಾದ ಪಾಠ್ಯಕ್ರಮವನ್ನು ಅನುಮೋದಿಸಲಾಯಿತು. **5** ನೇ ಪತ್ರಿಕೆಯನ್ನು **Dessertation** ಅಥವಾ **Constitutional Studies** ಎಂದು ಬದಲಾಯಿಸಲು ಸೂಚಿಸಿದೆ. |
| ವಿಷಯ 16 | ವಿಷಯ ಮತ್ತು | ವಿಶ್ವವಿದ್ಯಾಲಯದಲ್ಲಿ "ಪಿ.ಜಿ. ಡಿಪ್ಲೊಮ ಇನ್ ಯೋಗ" ಕೋರ್ಸ್ ಆರಂಭಿಸುವ ಬಗೆಗೆ<br>ವಿಶ್ವವಿದ್ಯಾಲಯದಲ್ಲಿ 2019-20ನೇ ಸಾಲಿನಲ್ಲಿ ಯೋಗ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೊಮಾ |

| | | |
|---|---|---|
| | ಟಿಪ್ಪಣಿ | ಕೋರ್ಸ್‌ಗಳನ್ನು ಆರಂಭಿಸಲಾಗಿದ್ದು ಈ ಕೋರ್ಸ್‌ಗೆ ಬೇಡಿಕೆ ಅಧಿಕವಾಗಿದೆ. ಯೋಗದಲ್ಲಿ ಪಿ. ಜಿ. ಡಿಪ್ಲೊಮಾ ಕೋರ್ಸ್‌ಗಳಿಗೆ ಆಸಕ್ತರು ಹೆಚ್ಚಾಗಿರುವುದು ಕಂಡುಬಂದಿದೆ. ಆದ್ದರಿಂದ ವಿಶ್ವವಿದ್ಯಾಲಯದಲ್ಲಿ "ಪಿ.ಜಿ. ಡಿಪ್ಲೊಮ ಇನ್ ಯೋಗ" ಈ ಕೋರ್ಸ್‌ನ್ನು ಪ್ರಾರಂಭಿಸಲು ಸಂಬಂಧಿಸಿದ ಪಾಠ್ಯಕ್ರಮವನ್ನು ಸಿದ್ಧಪಡಿಸಲು ಅಧ್ಯಯನ ಮಂಡಳಿಯ ಸಭೆಯನ್ನು ಮಾಡಿ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. 2020–21ನೇ ಸಾಲಿನಿಂದ ಈ ತರಗತಿಗಳನ್ನು ಪ್ರಾರಂಭಿಸಬಹುದಾಗಿದ್ದು, ಸಭೆಯ ಒಪ್ಪಿಗೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದಲ್ಲಿ "ಪಿ.ಜಿ. ಡಿಪ್ಲೊಮ ಇನ್ ಯೋಗ" ಈ ಕೋರ್ಸ್‌ನ್ನು ಪ್ರಾರಂಭಿಸಲು ಅಧ್ಯಯನ ಮಂಡಳಿಯು ರಚಿಸಿದ ಪಾಠ್ಯಕ್ರಮವನ್ನು ಸಭೆಯು ಒಪ್ಪಿತು ಹಾಗೂ 2020–21ನೇ ಸಾಲಿನಲ್ಲಿ "ಪಿ.ಜಿ. ಡಿಪ್ಲೊಮ ಇನ್ ಯೋಗ" ಕೋರ್ಸ್ ಆರಂಭಿಸಲು ಸಭೆಯು ಅನುಮತಿ ನೀಡಿತು.** |
| ವಿಷಯ 17 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಎಂ.ಎ ತರಗತಿಯ ಪ್ರಮಾಣ ಪತ್ರದಲ್ಲಿ ವಿಭಾಗದ ಹೆಸರನ್ನು ನಮೂದಿಸುವ ಬಗೆಗೆ**<br>2018–19ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಎಂ.ಎ ತರಗತಿಗಳು ವಿವಿಧ ವಿಭಾಗಗಳ ಅಡಿಯಲ್ಲಿ ನಡೆಯುತ್ತಿವೆ. ಈ ತರಗತಿಯ ಅಂಕಪಟ್ಟಿಯನ್ನು ಮತ್ತು ಪ್ರಮಾಣ ಪತ್ರವನ್ನು ವಿತರಿಸುವಾಗ ಇವುಗಳಲ್ಲಿ ವಿಭಾಗದ ಹೆಸರನ್ನು ನಮೂದಿಸಬಹುದಾಗಿದೆ. ಉದಾ: ಎಂ.ಎ ಸಂಸ್ಕೃತ ಎಂಬುದರ ಬದಲಾಗಿ ಎಂ. ಎ ಸಂಸ್ಕೃತ (ವೇದಾಂತ) ಎಂದು ನಮೂದಿಸಬಹುದಾಗಿದೆ. ಈ ವಿಷಯಕ್ಕೆ ಅನುಮೋದನೆ ಕೋರಿ ಸಭೆಯಲ್ಲಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಎಂ.ಎ ತರಗತಿಯ ಅಂಕಪಟ್ಟಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಆವರಣದಲ್ಲಿ ಸಂಬಂಧಿಸಿದ ವಿಭಾಗದಲ್ಲಿ ಅಧ್ಯಯನ ಮಾಡಿದ ವಿಷಯದ ಹೆಸರನ್ನು ನಮೂದಿಸಲು ಸಭೆಯು ಅನುಮತಿ ನೀಡಿದೆ.** |
| ವಿಷಯ 18 | ವಿಷಯ ಮತ್ತು ಟಿಪ್ಪಣಿ | **ಪುನರಾವರ್ತಿತ ವಿದ್ಯಾರ್ಥಿಗಳಿಗೆ ಅವಧಿ ಮೀರಿದ್ದರೂ ಪುನಃ ಪರೀಕ್ಷೆಗೆ ಕುಳಿತುಕೊಳ್ಳಲು ವಿಶೇಷ ಅವಕಾಶ ಕಲ್ಪಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಬಿ.ಎ ಮತ್ತು ಎಂ.ಎ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಉತ್ತೀರ್ಣವಾಗಲು ಅವಧಿಯನ್ನು ನಿಷ್ಕರ್ಷಿಸಲಾಗಿರುತ್ತದೆ. ಬಿ.ಎ ವಿದ್ಯಾರ್ಥಿಗಳಿಗೆ 3+3 ಮತ್ತು ಎಂ. ಎ ವಿದ್ಯಾರ್ಥಿಗಳಿಗೆ 2+2 ವರ್ಷ ಅವಧಿಯಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಅನುತ್ತೀರ್ಣರಾದ ಮತ್ತು ಸಕಾಲದಲ್ಲಿ ಪದವಿ ಪಡೆಯದೇ ಇರುವ ಅವಧಿ ಮೀರಿದ ವಿದ್ಯಾರ್ಥಿಗಳಿಂದ ಆವೇದನ ಪತ್ರಗಳು ಸಲ್ಲಿಕೆಯಾಗುತ್ತಿದ್ದು ಅವಧಿ ಮೀರಿದ ವಿದ್ಯಾರ್ಥಿಗಳಿಗೆ ಒಂದು ಬಾರಿ ಪರೀಕ್ಷೆ ಬರೆಯಲು ಅವಕಾಶ ನೀಡಬಹುದೇ ಎಂಬ ವಿಷಯದಲ್ಲಿ ಸ್ಪಷ್ಟನೆಯನ್ನು ಕೋರಿ ಸಭೆಯಲ್ಲಿ ವಿಷಯ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದಿಂದ ನಿರ್ದಿಷ್ಟವಾದ ಪರೀಕ್ಷಾ ಅವಧಿ ಮೀರಿದ್ದರೂ ಪುನಃ ಪರೀಕ್ಷೆ ತೆಗೆದುಕೊಳ್ಳಲು ಕೇವಲ ಒಂದು ವರ್ಷ ಎಂದರೆ 2020–21ನೇ ಸಾಲಿಗೆ ಮಾತ್ರ ವಿಶೇಷ ಅವಕಾಶ ಕಲ್ಪಿಸಲಾಗಿದೆ. 2020–21ನೇ ಸಾಲಿನಲ್ಲಿಯೂ ಉತ್ತೀರ್ಣರಾಗದಿದ್ದಲ್ಲಿ ಮತ್ತೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.** |
| ವಿಷಯ 19 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರತಿಲೇಖ ಪ್ರಮಾಣಪತ್ರ (Transcription Certificate) ನೀಡುವ ಬಗೆಗೆ.**<br>ನಮ್ಮ ವಿಶ್ವವಿದ್ಯಾಲಯದಲ್ಲಿ ಉತ್ತೀರ್ಣರಾಗಿ ಪ್ರಸ್ತುತ ವಿದೇಶದಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ಉದ್ಯೋಗ ಮಾಡುವುದಕ್ಕಾಗಿ ಕೆಲವು ವಿದ್ಯಾರ್ಥಿಗಳು ಪ್ರತಿಲೇಖ (Transcription Certificate) ಪತ್ರಕ್ಕಾಗಿ ಪ್ರಾಚಾರ್ಯರ ಮೂಲಕ ಅರ್ಜಿಯನ್ನು ಸಲ್ಲಿಸುತ್ತಿದ್ದು, ಆದರೆ ಇದುವರೆಗೂ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ನಿಯಮಗಳು ಇಲ್ಲದೇ ಇರುವುದರಿಂದ ಇದನ್ನು ವಿತರಿಸಬಹುದೇ ಅಥವಾ ವಿತರಿಸಬಾರದೇ ಎಂದು ಸಂಶಯವಿರುತ್ತದೆ. ವಿತರಿಸುವುದಿದ್ದಲ್ಲಿ ಅದಕ್ಕೆ ನಿರ್ದಿಷ್ಟ ಶುಲ್ಕವನ್ನು ನಿಗದಿ ಮಾಡಬೇಕಾಗಿರುತ್ತದೆ. ಈ ವಿಷಯದಲ್ಲಿ ಸ್ಪಷ್ಟ ನಿರ್ದೇಶನ ಕೋರಿ ಸಭೆಯಲ್ಲಿ ವಿಷಯ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮತ್ತು ಪ್ರತಿಲೇಖ ಅವಶ್ಯವಿರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರತಿಲೇಖ ಪ್ರಮಾಣಪತ್ರ (Transcription Certificate) ನೀಡಬಹುದಾಗಿದೆ ಎಂದು ಸಭೆಯು ನಿರ್ಧರಿಸಿತು. ಈ ಪ್ರತಿಲೇಖ ಪ್ರಮಾಣಪತ್ರಕ್ಕೆ ಒಂದು ಪ್ರಮಾಣ ಪತ್ರಕ್ಕೆ 3000ರೂ. ಶುಲ್ಕವನ್ನು ವಿಧಿಸಬಹುದಾಗಿದೆ ಎಂದು ತೀರ್ಮಾನಿಸಲಾಗಿದೆ.** |
| ವಿಷಯ 20 | ವಿಷಯ ಮತ್ತು ಟಿಪ್ಪಣಿ | ಬಿ.ಎ & ಎಂ.ಎ. ಅಂಕಪತ್ರಗಳನ್ನು ಹಾಗೂ ಪ್ರಮಾಣಪತ್ರಗಳನ್ನು ನೀಡಲು ಅವಧಿ ನಿರ್ಧರಿಸುವ ಬಗೆಗೆ.<br>ಬಿ.ಎ & ಎಂ.ಎ. ಅಂಕಪತ್ರಗಳನ್ನು ಹಾಗೂ ಪ್ರಮಾಣಪತ್ರಗಳನ್ನು ನೀಡಲು ಫಲಿತಾಂಶ ಪ್ರಕಟಗೊಂಡ ನಂತರ ಎಷ್ಟು ಅವಧಿಯಲ್ಲಿ ನೀಡಲಾಗುತ್ತಿದೆ ಎಂದು ಸರ್ಕಾರದಿಂದ ಹಾಗೂ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸಾರ್ವಜನಿಕರಿಂದ ಪತ್ರಗಳು ಬರುತ್ತಿವೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ನಿಯಮಗಳು ವಿಶ್ವವಿದ್ಯಾಲಯದಲ್ಲಿ ಇಲ್ಲದೇ ಇರುವುದರಿಂದ ಅಂಕಪತ್ರ ಮತ್ತು ಪ್ರಮಾಣ ಪತ್ರಗಳನ್ನು ನೀಡಲು ಒಂದು ನಿರ್ದಿಷ್ಟ ಅವಧಿಯನ್ನು ನಿರ್ಧರಿಸಬೇಕಿರುತ್ತದೆ. ಆದ್ದರಿಂದ ಸೂಕ್ತ ನಿರ್ದೇಶನ ಕೋರಿ ಈ ವಿಷಯವನ್ನು ಸಭೆಯಲ್ಲಿ ಮಂಡಿಸಿದೆ. |

| | | |
|---|---|---|
| | ನಿರ್ಣಯ | ಬಿ.ಎ & ಎಂ.ಎ. ಫಲಿತಾಂಶ ಪ್ರಕಟಗೊಂಡ ನಂತರ ಅಂಕಪತ್ರಗಳನ್ನು ಹಾಗೂ ಪ್ರಮಾಣಪತ್ರಗಳನ್ನು ಗರಿಷ್ಠ ಮೂರು ತಿಂಗಳುಗಳ ಒಳಗಾಗಿ ನೀಡಲು ನಿರ್ಧರಿಸಲಾಯಿತು. ವಿಶ್ವವಿದ್ಯಾಲಯದ ಪದವಿಗಳ ಪರಿನಿಯಮದಲ್ಲಿ ಈ ವಿಷಯವನ್ನು ಸೇರಿಸುವಂತೆ ನಿರ್ದೇಶನ ನೀಡಲಾಗಿದೆ. |
| ವಿಷಯ 21 | ವಿಷಯ ಮತ್ತು ಟಿಪ್ಪಣಿ | ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳ ನೈಜತೆ ದೃಢೀಕರಣಕ್ಕಾಗಿ ಶುಲ್ಕ ನಿಗದಿಪಡಿಸುವ ಬಗೆಗೆ.<br>ಸರ್ಕಾರಿ, ಅರೆಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಂದ ಉದ್ಯೋಗ ಅಥವಾ ಇತರೆ ಉದ್ದೇಶದ ನಿಮಿತ್ತವಾಗಿ ವಿದ್ಯಾರ್ಥಿಗಳ ಅಂಕಪತ್ರಗಳು & ಪದವಿ ಪ್ರಮಾಣಪತ್ರದ ನೈಜತೆಯ ಪರಿಶೀಲನೆ, ದೃಢೀಕರಣಕ್ಕಾಗಿ ಆಯಾ ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸುತ್ತಿದ್ದು, ಆದರೆ ಇದುವರೆಗೂ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ನಿಯಮಗಳು ಇಲ್ಲದೆ ಇರುವುದರಿಂದ, ಪ್ರತಿ ಅಂಕಪತ್ರ ಮತ್ತು ಪದವಿ ಪ್ರಮಾಣಪತ್ರಕ್ಕೆ ನಿರ್ದಿಷ್ಟ ಶುಲ್ಕವನ್ನು ನಿಗದಿ ಮಾಡಬೇಕಾಗಿ ಕೋರಿದೆ. |
| | ನಿರ್ಣಯ | ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳ ನೈಜತೆ ದೃಢೀಕರಣಕ್ಕಾಗಿ ಶುಲ್ಕವನ್ನು ವಿಷಯ ಸಂಖ್ಯೆ 14ರಲ್ಲಿರುವ ಶುಲ್ಕಪರಿಷ್ಕರಣಾ ಸಭೆಯಲ್ಲಿ ನಿರ್ಧರಿಸುವಂತೆ ಅನುಸರಿಸಲು ತೀರ್ಮಾನಿಸಲಾಗಿದೆ. |
| ವಿಷಯ 22 | ವಿಷಯ ಮತ್ತು ಟಿಪ್ಪಣಿ | **2011–12ನೇ ಸಾಲಿನಿಂದ 2015–16ನೇ ಸಾಲಿನ ಅಂಕಪತ್ರಗಳನ್ನು ಮುದ್ರಿಸಿ ನೀಡುವ ಬಗೆಗೆ.**<br>ವಿಶ್ವವಿದ್ಯಾಲಯಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಾವಿದ್ಯಾಲಯಗಳು ಮತ್ತು ನಿರ್ದೇಶನಾಲಯದಲ್ಲಿ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳು 2011–12ನೇ ಸಾಲಿನಿಂದ 2015–16ನೇ ಸಾಲಿನ ಕೆಲವರು ಕಾರಣಾಂತರಗಳಿಂದ ಅಂಕಪತ್ರಗಳು ಸ್ವೀಕರಿಸಿರುವುದಿಲ್ಲ ಎಂದು ಅನೇಕ ಪತ್ರಗಳನ್ನು ಬರೆಯುತ್ತಿದ್ದು, ಆ ಅಂಕಪತ್ರಗಳನ್ನು ಸಿದ್ಧಪಡಿಸಿ ಕೊಡಬೇಕಾಗಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆ ವಿದ್ಯಾರ್ಥಿಗಳಿಗೆ ಅಂಕಪತ್ರವನ್ನು ನೀಡಿದಲ್ಲಿ ಆಡಿಟ್ ಸಮಯದಲ್ಲಿ ತೊಂದರೆ ಆಗುತ್ತಿರುವುದರಿಂದ, ಅಂಕಪತ್ರದ ಶುಲ್ಕವನ್ನು ಸ್ವೀಕರಿಸಬೇಕೇ ಅಥವಾ ಬೇಡವೇ ಎಂಬ ಕುರಿತು ಗೊಂದಲ ಇರುವುದರಿಂದ, ಇದರ ಕುರಿತಾಗಿ ಸ್ಪಷ್ಟನೆಯನ್ನು ಕೋರಿದೆ. |
| | ನಿರ್ಣಯ | **2011–12ನೇ ಸಾಲಿನಿಂದ 2015–16ನೇ ಸಾಲಿನ ಅಂಕಪತ್ರಗಳನ್ನು ಮುದ್ರಿಸಿ ನೀಡುವ ಕುರಿತಾಗಿ ವಿಸ್ತೃತವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.**<br>1. ಪ್ರೊ. ಪಾಲಯ್ಯ ಸಿ. – ಅಧ್ಯಕ್ಷರು<br>2. ಪ್ರೊ. ಬಿ. ವಿ. ವೆಂಕಟರಮಣ – ಸದಸ್ಯರು<br>3. ವಿದ್ವಾನ್ ವೆಂಕಟೇಶ ವಿ. – ಸದಸ್ಯ ಸಂಚಾಲಕರು<br>ಈ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ ಅಂಕಪಟ್ಟಿಯನ್ನು ಮುದ್ರಿಸುವ ಕುರಿತು ಕ್ರಮ ಕೈಗೊಳ್ಳಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು. |
| ವಿಷಯ 23 | ವಿಷಯ ಮತ್ತು ಟಿಪ್ಪಣಿ | ವಿಶಿಷ್ಟಾಚಾರ್ಯ ಹಾಗೂ ವಿದ್ಯಾವಾರಿಧಿ ಷಾಣ್ಮಾಸಿಕ ಸತ್ರದ ಪ್ರಮಾಣಪತ್ರ ಹಾಗೂ ಅಂಕಪತ್ರವನ್ನು ನೀಡುವ ಬಗೆಗೆ.<br>2011–12 ನೇ ಸಾಲಿನಿಂದ 2015–16 ನೇ ಸಾಲಿನವರೆಗೆ ವಿಶಿಷ್ಟಾಚಾರ್ಯ(ಎಂ.ಫಿಲ್) ಹಾಗೂ ವಿದ್ಯಾವಾರಿಧಿ(ಪಿಎಚ್.ಡಿ) ಷಾಣ್ಮಾಸಿಕ ಸತ್ರದ ಪ್ರಮಾಣಪತ್ರ ಹಾಗೂ ಅಂಕಪತ್ರವನ್ನು ಕಾರಣಾಂತರಗಳಿಂದ ನೀಡಲಾಗಿರುವುದಿಲ್ಲ. ಸದರಿ ವರ್ಷದ ವಿದ್ಯಾರ್ಥಿಗಳು ಪ್ರಮಾಣಪತ್ರ & ಅಂಕಪತ್ರದ ಬೇಡಿಕೆಯನ್ನು ಇಡುತ್ತಿದ್ದು, ಆ ವಿದ್ಯಾರ್ಥಿಗಳಿಗೆ ಅಂಕಪತ್ರವನ್ನು ನೀಡಲು ಆಡಿಟ್ ಸಮಯದಲ್ಲಿ ತೊಂದರೆ ಆಗುತ್ತಿರುವುದರಿಂದ, ಅಂಕಪತ್ರದ ಶುಲ್ಕವನ್ನು ಸ್ವೀಕರಿಸಬೇಕೇ ಬೇಡವೇ ಎಂಬ ಕುರಿತು ಗೊಂದಲ ಇರುವುದರಿಂದ, ಇದರ ಕುರಿತಾಗಿ ಸ್ಪಷ್ಟನೆಯನ್ನು ಕೋರಿದೆ. |
| | ನಿರ್ಣಯ | **2011–12ನೇ ಸಾಲಿನಿಂದ 2015–16ನೇ ಸಾಲಿನ ವಿಶಿಷ್ಟಾಚಾರ್ಯ ಹಾಗೂ ವಿದ್ಯಾವಾರಿಧಿ ಷಾಣ್ಮಾಸಿಕ ಸತ್ರದ ಪ್ರಮಾಣಪತ್ರ ಹಾಗೂ ಅಂಕಪತ್ರವನ್ನು ಮುದ್ರಿಸಿ ನೀಡುವ ಕುರಿತಾಗಿ ತೀರ್ಮಾನ ಕೈಗೊಳ್ಳಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.**<br>1. ಪ್ರೊ. ಪಾಲಯ್ಯ ಸಿ. – ಅಧ್ಯಕ್ಷರು<br>2. ಪ್ರೊ. ಬಿ. ವಿ. ವೆಂಕಟರಮಣ – ಸದಸ್ಯರು<br>3. ವಿದ್ವಾನ್ ವೆಂಕಟೇಶ ವಿ. – ಸದಸ್ಯ ಸಂಚಾಲಕರು<br>ಈ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ ಅಂಕಪಟ್ಟಿಯನ್ನು ಮುದ್ರಿಸುವ ಕುರಿತು ಕ್ರಮ ಕೈಗೊಳ್ಳಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು. |
| ವಿಷಯ 24 | ವಿಷಯ ಮತ್ತು ಟಿಪ್ಪಣಿ | ವಿಶ್ವವಿದ್ಯಾಲಯದಿಂದ ಆಹ್ವಾನಿತರಾಗಿ ಸ್ಥಳೀಯ ಹಾಗೂ ಹೊರ ಊರುಗಳಿಂದ ಬರುವ ಪಂಡಿತರ/ಅಧ್ಯಾಪಕರ ದಿನಭತ್ಯೆ ನಿಗದಿಪಡಿಸುವ ಬಗೆಗೆ.<br>ಸ್ಥಳೀಯ ಹಾಗೂ ಹೊರ ಊರುಗಳಿಂದ ಬರುವ ಪಂಡಿತರ/ಅಧ್ಯಾಪಕರ ದಿನಭತ್ಯೆಯು ಪ್ರಸ್ತುತ ರೂ.300.00 ಎಂದು ದಿನಾಂಕ: 18/10/2016 ರಂದು ನಡೆದ 18ನೇ ಪ್ರಶಿಕ್ಷಣ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸದರಿ ದಿನಭತ್ಯೆಯನ್ನು ಕೆ.ಸಿ.ಎಸ್.ಆರ್ ನಿಯಮಾವಳಿಯಂತೆ, ಆಯಾ ವರ್ಗಗಳಿಗೆ ಅನುಸಾರವಾಗಿ |

| | | |
|---|---|---|
| | | ನೀಡಬಹುದಾಗಿದ್ದು ಸಭೆಯ ಅನುಮತಿ ಕೋರಿದೆ. |
| | ನಿರ್ಣಯ | ಈ ವಿಷಯವನ್ನು ಕೈಬಿಡಲಾಗಿದೆ. |
| | | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು** |
| ವಿಷಯ 25 | ವಿಷಯ ಮತ್ತು ಟಿಪ್ಪಣಿ | **37ನೇ ಹಣಕಾಸು ಸಮಿತಿಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ದಿನಾಂಕ27.07.2020ರಂದು ಹಣಕಾಸು ಸಮಿತಿಯ 37ನೇ ಸಭೆ ನಡೆಯಿತು. ಈ ಸಮಿತಿಯ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ದಿನಾಂಕ27.07.2020ರಂದು ಹಣಕಾಸು ಸಮಿತಿಯ 37ನೇ ಸಭೆಯ ನಡಾವಳಿಯನ್ನು ಪ್ರಶಿಕ್ಷಣ ಪರಿಷತ್ ಸಭೆಯು ಅನುಮೋದಿಸಿದೆ.** |
| ವಿಷಯ 26 | ವಿಷಯ ಮತ್ತು ಟಿಪ್ಪಣಿ | **ವೇದಾಂತ ಪರಿಭಾಷಾ ಕಾರ್ಯಶಾಲೆಯನ್ನು ಆಯೋಜಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಆಸಕ್ತ ವೇದಾಂತಾಭ್ಯಾಸುಗಳಿಗಾಗಿ 10 ದಿನಗಳ ಕಾಲ ನಡೆಯುವ ವೇದಾಂತ ಪರಿಭಾಷಾ ಕಾರ್ಯಶಾಲೆಯನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಕಾರ್ಯಶಾಲೆಯನ್ನು online mode ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಕಾರ್ಯಶಾಲೆಗೆ ವಿಶ್ವವಿದ್ಯಾಲಯದಿಂದ ಯಾವುದೇ ಧನ ಸಹಾಯ ನೀಡಲಾಗುವುದಿಲ್ಲ. ಕೇವಲ ಪ್ರಮಾಣ ಪತ್ರವನ್ನು ವಿಶ್ವವಿದ್ಯಾಲಯದ ವತಿಯಿಂದ ನೀಡಲಾಗುತ್ತದೆ. ಈ ವಿಷಯಕ್ಕೆ ಅನುಮತಿ ಕೋರಿ ಸಭೆಯಲ್ಲಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ವೇದಾಂತ ಪರಿಭಾಷಾ ಕಾರ್ಯಶಾಲೆಯನ್ನು online mode ನಲ್ಲಿ ಆಯೋಜಿಸಿರುವುದನ್ನು ಸಭೆಯು ಒಪ್ಪಿದೆ. ವಿಶ್ವವಿದ್ಯಾಲಯದ ವತಿಯಿಂದ ಪ್ರಮಾಣಪತ್ರವನ್ನು ನೀಡುವುದಕ್ಕೆ ಸಭೆಯು ಒಪ್ಪಿಗೆ ನೀಡಿದೆ.** |
| ವಿಷಯ 27 | ವಿಷಯ ಮತ್ತು ಟಿಪ್ಪಣಿ | **ಜ್ಯೋತಿಷ್ಯ ಅಧ್ಯಯನ ಕೇಂದ್ರವನ್ನು ನಡೆಸಲು ಈ ಕೆಳಕಂಡ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದಕ್ಕೆ ಘಟನೋತ್ತರ ಅನುಮತಿಯನ್ನು ನೀಡುವ ಬಗೆಗೆ.**<br>ಜ್ಯೋತಿಷ್ಯ ಅಧ್ಯಯನ ಕೇಂದ್ರಗಳನ್ನು ನಡೆಸಲು ಪರಿಶೀಲನೆ ನಡೆಸಿ ಈ ಕೆಳಕಂಡ ಸಂಸ್ಥೆಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳಿಗೆ ಮಾನ್ಯತೆ ನೀಡಲಾಗಿದೆ. ಈ ಮಾನ್ಯತೆಗಳಿಗೆ ಘಟನೋತ್ತರ ಅನುಮತಿ ನೀಡುವಂತೆ ಕೋರಿ ಸಭೆಯಲ್ಲಿ ವಿಷಯ ಮಂಡಿಸಲಾಗಿದೆ.<br>1. **ಕರ್ನಾಟಕ ರಾಜ್ಯ ವಂಶಪಾರಂಪರ್ಯ ಜ್ಯೋತಿಷ್ಯಗಾರರ ಸಂಘ, ಬೆಂಗಳೂರು**<br>(ನಂ –02, ನ್ಯೂ ಕಾರ್ಪೋರೇಶನ್ ಬಿಲ್ಡಿಂಗ್, ಬಿನ್ನಿ ಮಿಲ್ ರೋಡ್, ಕಾಟನ್ ಪೇಟೆ –560023)<br>2. **ಜ್ಯೋತಿರ್ಮಯ ಕಾಲೇಜ್ ಆಫ್ ಆಸ್ಟ್ರಾಲಜಿ ಅಂಡ್ ರಿಸರ್ಚ ಸೆಂಟರ್ ಟ್ರಸ್ಟ್**<br>ನಂ. 343, ನೆಲಮಹಡಿ 6ನೇ ಬಿ ಅಡ್ಡರಸ್ತೆ, ತ್ರಿವೇಣಿ ರಸ್ತೆ,ಯಶವಂತಪುರ, ಬೆಂಗಳೂರು–560022<br>3. **ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ವೇದ ಜ್ಯೋತಿಷ್ಯ ವೀರಶೈವಾಗಮ ಸಂಸ್ಕೃತ ಪಾಠಶಾಲೆ ಎಡೆಯೂರು,**<br>ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಕ್ಷೇತ್ರ ಎಡೆಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ –572142<br>4. **ಶ್ರೀ ವ್ಯಾಸಮಹರ್ಷಿ ಜ್ಯೋತಿಷ್ಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ –**<br>#206, ಬನಶಂಕರಿ 6ನೇ ಹಂತ 2ನೇ ಬ್ಲಾಕ್, ಬೆಂಗಳೂರು –560098 |
| | ನಿರ್ಣಯ | **ಜ್ಯೋತಿಷ್ಯ ಅಧ್ಯಯನ ಕೇಂದ್ರವನ್ನು ನಡೆಸಲು ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದಕ್ಕೆ ಘಟನೋತ್ತರ ಅನುಮತಿಯನ್ನು ನೀಡಲಾಗಿದೆ.** |
| ವಿಷಯ 28 | ವಿಷಯ ಮತ್ತು ಟಿಪ್ಪಣಿ | **ವೇದಾಂತ ವಿಭಾಗದಿಂದ ದ್ವೈತ ವೇದಾಂತ ಸರ್ಟಿಫಿಕೇಟ್ ಕೋರ್ಸ್ ನಡೆಸುವ ಬಗೆಗೆ**<br>2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೇದಾಂತ ನಿಕಾಯದ ಅಡಿಯಲ್ಲಿ ದ್ವೈತವೇದಾಂತ ಸರ್ಟಿಫಿಕೇಟ ಕೋರ್ಸಿನ ತರಗತಿಗಳನ್ನು ಆರಂಭಿಸುವ ಕುರಿತು ವಿಶ್ವವಿದ್ಯಾಲಯದ ವೇದಾಂತ ವಿಭಾಗದ ವತಿಯಿಂದ ದ್ವೈತವೇದಾಂತ ಸರ್ಟಿಫಿಕೇಟ ಕೋರ್ಸನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಟಿಫಿಕೇಟ ಕೋರ್ಸಿನ ತರಗತಿಯನ್ನು ಪ್ರಾರಂಭಿಸಲು ಅಧ್ಯಯನ ಮಂಡಳಿಯ ಸಭೆಯು ಸೂಚಿಸಿದ ಅಭಿಪ್ರಾಯದ ಕ್ರೋಢೀಕೃತ ವಿಷಯಗಳು ಈ ಕೆಳಕಂಡಂತಿವೆ.<br>1. ಕೋರ್ಸಿನ ಅವಧಿ – 6 ತಿಂಗಳು. ವಾರಕ್ಕೆ 6 ದಿನಗಳು.<br>2. ಅರ್ಹತೆ – ಪಿ.ಯು.ಸಿ. ಅಥವಾ ತತ್ಸಮಾನ ತರಗತಿ.<br>3. ದ್ವೈತವೇದಾಂತ ಸರ್ಟಿಫಿಕೇಟ ಕೋರ್ಸಿನ ತರಗತಿಗಳಿಗೆ ಈ ಕೆಳಕಂಡ ಪಾಠ್ಯವನ್ನು ಅಳವಡಿಸಿಕೊಳ್ಳಬಹುದು.<br>ಒಟ್ಟೂ ಎರಡು ಪತ್ರಿಕೆಗಳು –.<br>1 ನೇ ಪತ್ರಿಕೆ – ಪ್ರಮೇಯ ಭಾಗ – ಪದಾರ್ಥ ಸಂಗ್ರಹ, ಮಧ್ವಸಿದ್ಧಾಂತ ಸಾರ, ಪದಾರ್ಥ ಸಂಗ್ರಹ ಸಾರ (ಡಾ. ಎಚ್.ಪಿ ನಾಗರಾಜ)<br>2 ನೇ ಪತ್ರಿಕೆ – ಪ್ರಮಾಣ ಭಾಗ – ಪದಾರ್ಥ ಸಂಗ್ರಹ ಸಾರ, ಪ್ರಮಾಣ ಪರಿಚಯ (ಡಾ. |

| | | |
|---|---|---|
| | | ತಿರುಮಲ ಕುಲಕರ್ಣಿ) |
| | ನಿರ್ಣಯ | ವೇದಾಂತ ವಿಭಾಗದಿಂದ ನೀಡಲಾದ ಪ್ರಸ್ತಾವನೆಯಂತೆ "ದ್ವೈತ ವೇದಾಂತ"ದ ಅಲ್ಪಾವಧಿ ಕೋರ್ಸ್ ನಡೆಸಲು ಸಭೆಯು ಅನುಮತಿ ನೀಡಿದೆ. |
| ವಿಷಯ 29 | ವಿಷಯ ಮತ್ತು ಟಿಪ್ಪಣಿ | ವೇದಾಂತ ನಿಕಾಯದ ಅಡಿಯಲ್ಲಿ "ವೇದಾಂತ-ಯೋಗ ಸ್ನಾತಕೋತ್ತರ ಪದವಿ" ತರಗತಿಗಳನ್ನು ಆರಂಭಿಸುವ ಬಗೆಗೆ.<br>2021-22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ವೇದಾಂತ-ಯೋಗ ಸ್ನಾತಕೋತ್ತರ ಪದವಿ ತರಗತಿಗಳನ್ನು ಪ್ರಾರಂಭಿಸಲು ಅನುಮತಿಯನ್ನು ಕೇಳಲಾಗಿತ್ತು. ಅದಕ್ಕೆ ಸಂಬಂಧಿಸಿದ ಪಾಠ್ಯಕ್ರಮವನ್ನು ಸಿದ್ಧಪಡಿಸಲು BOS ಅನ್ನು ರಚಿಸಿ ಸಭೆಯನ್ನು ಮಾಡಿ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಪಾಠ್ಯಕ್ರಮವನ್ನು ಲಗತ್ತಿಸಿದೆ. ವೇದಾಂತ-ಯೋಗ ಸ್ನಾತಕೋತ್ತರ ಪದವಿ ತರಗತಿಗಳನ್ನು ಪ್ರಾರಂಭಿಸಲು ಅನುಮತಿಗಾಗಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ವೇದಾಂತ-ಯೋಗ ಸ್ನಾತಕೋತ್ತರ ಪದವಿ ತರಗತಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಅಭಿಪ್ರಾಯ ಪಡೆದು ಈ ಕೋರ್ಸ್‌ನ್ನು ಆರಂಭಿಸಲು ಸಭೆಯು ತಿಳಿಸಿತು.<br>1. ಶ್ರೀ ಟಿ. ಎನ್ ಪ್ರಭಾಕರ್, ಸಿಂಡಿಕೇಟ್ ಸದಸ್ಯರು – ಅಧ್ಯಕ್ಷರು<br>2. ಪ್ರೊ. ವೀರನಾರಾಯಣ ಎನ್.ಕೆ ಪಾಂಡುರಂಗಿ, ಕುಲಸಚಿವರು – ಸದಸ್ಯ ಸಂಚಾಲಕರು<br>3. ಡಾ. ಕೆ. ಎಮ್ ಮಹದೇವಯ್ಯ, ಪ್ರಶಿಕ್ಷಣ ಪರಿಷತ್ ಸದಸ್ಯರು, – ಸದಸ್ಯರು |
| ವಿಷಯ 30 | ವಿಷಯ ಮತ್ತು ಟಿಪ್ಪಣಿ | ಕಾಲೇಜುಗಳ ಸಂಯೋಜನೆ ಕುರಿತು ಏಕರೂಪದ ಪರಿನಿಯಮಾವಳಿಯನ್ನು ಪರಿಶೀಲಿಸಿ ಮಂಡಿಸುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಪ್ರಾರಂಭಗೊಂಡಿದ್ದು, ಕಾಲೇಜುಗಳಿಗೆ ಅನುಮತಿ ಮತ್ತು ಮಾನ್ಯತೆಯ ವಿಚಾರವಾಗಿ ಈ ಹಿಂದೆ ಜಾರಿಯಲ್ಲಿದ್ದ Grant In Aid:1976ನ್ನು ಪಾಲಿಸಲಾಗುತ್ತಿತ್ತು. ಆದರೆ ವಿಶ್ವವಿದ್ಯಾಲಯ ಸ್ಥಾಪನೆಗೊಂಡದ್ದರಿಂದ ಈ ವಿಶ್ವವಿದ್ಯಾಲಯವು UGC 2f ಮಾನ್ಯತೆ ಹೊಂದಿರುವುದರಿಂದ UGC ಮತ್ತು ಸರ್ಕಾರದ ಕಾಲಿಕ ಆದೇಶ ಮತ್ತು ನಿಯಮಾವಳಿಗಳನ್ನು ವಿಶ್ವವಿದ್ಯಾಲಯವು ಪಾಲಿಸಬೇಕಾದ್ದರಿಂದ ವಿಶ್ವವಿದ್ಯಾಲಯವು Statute of Karnataka Samskrit University Affiliation To Colleges (Grant of Affiliation of Colleges and Institutions and Withdrawals of Such Affiliation) ನಿಯಮಾವಳಿಗಳನ್ನು ರಚಿಸಲಾಗಿತ್ತು. ಈ ನಿಯಮಾವಳಿಗೆ ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಅಂಕಿತ ದೊರೆತಿರುತ್ತದೆ. ಆದರೆ ಸರ್ಕಾರದ ಪತ್ರ ಸಂಖ್ಯೆ: ಇಡಿ 240 ಯುಎನ್‌ಇ 2019, ದಿನಾಂಕ: 19.12.2019ರಂತೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಏಕರೂಪವಾದ ಸಂಯೋಜನೆ ಪರಿನಿಯಮಾವಳಿಯನ್ನು ರೂಪಿಸುವಂತೆ ಸದರಿ ಪರಿನಿಯಮಾವಳಿಯ ಕರಡನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನೂತನ ಪರಿನಿಯಮಾವಳಿಯನ್ನು ರಚಿಸಲು ಅನುಮತಿ ಕೋರಿ 2020ರ ಜನವರಿ 07ರಂದು ಪ್ರಶಾಸನ ಸಮಿತಿ (ಸಿಂಡಿಕೇಟ್) 54ನೇ ಸಭೆಯಲ್ಲಿ ವಿಷಯ ಮಂಡಿಸಲಾಗಿತ್ತು. ಕಾಲೇಜುಗಳ ಸಂಯೋಜನೆ ಕುರಿತು ಏಕರೂಪದ ಪರಿನಿಯಮಾವಳಿಯನ್ನು ಅನುಮೋದಿಸಿ ಅಳವಡಿಸಲು ಪ್ರಶಾಸನ ಸಮಿತಿಯು ಅನುಮತಿ ನೀಡಿತು ಮತ್ತು ಎಲ್ಲ ಕಾಲೇಜುಗಳಿಗೆ ಪರಿನಿಯಮಾವಳಿಯನ್ನು ಅನ್ವಯಿಸಲು ಮೂರು ತಿಂಗಳುಗಳ ಕಾಲಾವಕಾಶ ನೀಡಲು ಸಭೆಯು ತಿಳಿಸಿತ್ತು. ಅದರಂತೆ ಪರಿನಿಯಮ ಸಿದ್ಧಪಡಿಸಲಾಗಿದ್ದು, ಕೆಲವು ಅಂಶಗಳನ್ನು ಪುನರ್ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಆದ್ದರಿಂದ ಈ ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿದೆ. |
| | ನಿರ್ಣಯ | ಕಾಲೇಜುಗಳ ಸಂಯೋಜನೆ ಕುರಿತು ಏಕರೂಪದ ಪರಿನಿಯಮಾವಳಿಯನ್ನು ಸಭೆಯು ಪುನರ್ಪರಿಶೀಲಿಸಿದೆ. ಈ ಕೆಳಕಂಡ ವಿಷಯಗಳಲ್ಲಿ ಬದಲಾವಣೆ ಮಾಡಿ ಸರ್ಕಾರಕ್ಕೆ ಸಲ್ಲಿಸಲು ತಿಳಿಸಿದೆ.<br>1. ಕಾಲೇಜುಗಳ ಸಂಯೋಜನೆ ಕುರಿತು ಏಕರೂಪದ ಪರಿನಿಯಮ ಸಂಖ್ಯೆ:2.2ದಲ್ಲಿ ಸಾಹಿತ್ಯ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದ ವಿದ್ಯಾರ್ಥಿಗಳನ್ನು ಕಾಲೇಜು ಶಿಕ್ಷಣದಲ್ಲಿ ಸೇರಿಸಿಕೊಳ್ಳುವಂತೆ ಬದಲಾಯಿಸಬಹುದಾಗಿದೆ.<br>2. ಪರಿನಿಯಮ ಸಂಖ್ಯೆ:3.1.1 ರಲ್ಲಿ ನಿರ್ದಿಷ್ಟವಾಗಿರುವಷ್ಟು ಸ್ಥಳಾವಕಾಶ ಇಲ್ಲದಿದ್ದರೂ ಗ್ರಂಥಾಲಯ, ವಿದ್ಯಾರ್ಥಿ ನಿಲಯ ಮತ್ತು ಅನುಮತಿ ಪಡೆದ ವಿಷಯಗಳ ಆಧಾರದ ಮೇಲೆ ಸಾಕಷ್ಟು ಬೋಧನಾ ಕೊಠಡಿಗಳು ಇದ್ದಲ್ಲಿ ಸಂಯೋಜನೆಗಾಗಿ ಅನುಮತಿ ನೀಡಬಹುದೆಂದು ಬದಲಾಯಿಸಬಹುದಾಗಿದೆ.<br>3. ಪರಿನಿಯಮ ಸಂಖ್ಯೆ:3.2.2ರಲ್ಲಿ **Corpus Fund** ಮೊತ್ತವನ್ನು **1.00.000** ರೂಗಳಿಗೆ ನಿಗದಿಪಡಿಸಬಹುದಾಗಿದೆ.<br>4. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವುದು. |

| | | |
|---|---|---|
| ವಿಷಯ 31 | ವಿಷಯ ಮತ್ತು ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ಬಿ. ಎ ಸಂಜೆ ಕಾಲೇಜನ್ನು ಪುನಃ ಪ್ರಾರಂಭಿಸುವ ಬಗೆಗೆ.<br>ವಿಶ್ವವಿದ್ಯಾಲಯದ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಗೋದಾ ಗೋಪಾಲ್ ರವರು ಸಂಜೆ ಕಾಲೇಜನ್ನು ಪುನಃ ಆರಂಭಿಸಲು ಸೂಚನೆ ನೀಡಿರುತ್ತಾರೆ. ಇದರಿಂದ ವಿವಿಧ ಔದ್ಯೋಗಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಕೃತಾಸಕ್ತರಿಗೆ ಸಂಸ್ಕೃತದಲ್ಲಿ ಪದವಿಯನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಆಗಮಿಸುತ್ತಾರೆ. ವಿಶ್ವವಿದ್ಯಾಲಯಕ್ಕೆ ಆದಾಯ ಮತ್ತು ಪ್ರಚಾರ ಹೆಚ್ಚುವ ನಿಟ್ಟಿನಲ್ಲಿ ಇದು ಸಹಕಾರಿಯಾಗುತ್ತದೆ. ಆದ್ದರಿಂದ ಸಂಜೆ 4.30ರಿಂದ 8.00ರ ವರೆಗೆ ಸಂಜೆ ಕಾಲೇಜನ್ನು ನಡೆಸಬಹುದಾಗಿದ್ದು ಇದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | ವಿಶ್ವವಿದ್ಯಾಲಯದಲ್ಲಿ ಬಿ. ಎ ಸಂಜೆ ಕಾಲೇಜನ್ನು ಪುನಃ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.<br>1. ಪ್ರೊ. ಬಿ.ವಿ ವೆಂಕಟರಮಣ – ಅಧ್ಯಕ್ಷರು<br>2. ಪ್ರೊ. ಸಿ ಪಾಲಯ್ಯ – ಸದಸ್ಯರು<br>3. ಡಾ. ನಿವಾಯಕ ನಾಮಣ್ಣವರ – ಸದಸ್ಯ ಸಂಚಾಲಕರು<br>ಈ ಸಮಿತಿಯ ನಿರ್ಣಯದಂತೆ ಸಂಜೆ ಕಾಲೇಜನ್ನು ಆರಂಭಿಸುವ ಕುರಿತು ಪ್ರಸ್ತಾವನೆಯನ್ನು ಪುನಃ ಪರಿಶೀಲಿಸಲು ಸಭೆಯು ತಿಳಿಸಿದೆ. |
| ವಿಷಯ 32 | ವಿಷಯ ಮತ್ತು ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಕೋಶ ಸ್ಥಾಪಿಸುವ ಬಗೆಗೆ.<br>ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಲ್ಲಿ ಕ್ಷೇಮಾಭಿವೃದ್ಧಿ ಕೋಶ ಸ್ಥಾಪಿಸಿ ಡೀನ್, ಸ್ಟುಡೆಂಟ್ ವೆಲ್‌ಫೇರ್ –ಇವರನ್ನು ನಿಯೋಜಿಸಬಹುದಾಗಿದೆ. ಈ ವಿಷಯವನ್ನು ಅನುಮೋದಿಸಲು ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಕೋಶ ಸ್ಥಾಪಿಸಲು ಸಭೆಯು ಅನುಮತಿ ನೀಡಲಾಗಿದೆ ಮತ್ತು ಪ್ರವೇಶ ಪಡೆಯುವಾಗಲೇ ವಿದ್ಯಾರ್ಥಿಗಳಿಂದ 10ರೂ. ಶುಲ್ಕವನ್ನು ಪಡೆಯಬಹುದಾಗಿದೆ. **Dean, Student Welfare and Placement Cell** ಇವರನ್ನು ನಿಯೋಜಿಸಲು ತಿಳಿಸಿದೆ. |
| ವಿಷಯ 33 | ವಿಷಯ ಮತ್ತು ಟಿಪ್ಪಣಿ | ಉದ್ಯೋಗಾವಕಾಶ ಮಾಹಿತಿ ಕೇಂದ್ರ ಸ್ಥಾಪಿಸುವ ಬಗೆಗೆ.<br>ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ಇರುವಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿಯೂ ಅವಶ್ಯವಿರುವ ಅಭ್ಯರ್ಥಿಗಳಿಗೆ ಉದ್ಯೋಗ ಮಾಹಿತಿ ನೀಡಲು ಉದ್ಯೋಗ ಮಾಹಿತಿ ಕೇಂದ್ರ ಸ್ಥಾಪಿಸಬಹುದಾಗಿದೆ. ಇದರಿಂದ ಉದ್ಯೋಗಾವಕಾಶ ಇರುವ ಮಾಹಿತಿ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಆದ್ದರಿಂದ ಈ ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿದೆ. |
| | ನಿರ್ಣಯ | ವಿಶ್ವವಿದ್ಯಾಲಯದಲ್ಲಿ ಉದ್ಯೋಗಾವಕಾಶ ಮಾಹಿತಿ ಕೇಂದ್ರ ಸ್ಥಾಪಿಸಲು ಸಭೆಯು ಅನುಮತಿ ನೀಡಿತು. |
| ವಿಷಯ 34 | ವಿಷಯ ಮತ್ತು ಟಿಪ್ಪಣಿ | ಯುಜಿಸಿಯ 12 ಬಿ ನಿಯಮಾನುಸಾರ 6 ತಿಂಗಳಿಗೊಮ್ಮೆ ಸಿ.ಎ.ಎಸ್ ಅರ್ಜಿ ಆಹ್ವಾನಿಸುವ ಬಗೆಗೆ.<br>ಯುಜಿಸಿಯ ನಿಯಮಾವಳಿ 10.1 ರ ಅನುಸಾರ ವಿಶ್ವವಿದ್ಯಾಲಯಗಳಲ್ಲಿ ಪ್ರತಿ 6 ತಿಂಗಳಿಗೆ ಒಮ್ಮೆ ಸಿ.ಎ.ಎಸ್ ಅರ್ಜಿ ಆಹ್ವಾನಿಸಿ ಅರ್ಹ ಸಿಬ್ಬಂದಿಗಳಿಗೆ ಬಡ್ತಿ ನೀಡುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿಯೂ ಈ ರೀತಿಯಾಗಿ ಪ್ರತಿ 06 ತಿಂಗಳುಗಳಿಗೆ ಒಮ್ಮೆ ಸಿ.ಎ.ಎಸ್ ಅರ್ಜಿ ಆಹ್ವಾನಿಸಬೇಕಾಗಿದ್ದು ಸಭೆಯ ಅನುಮೋದನೆಗೆ ಮಂಡಿಸಿದೆ. |
| | ನಿರ್ಣಯ | ವಿಶ್ವವಿದ್ಯಾಲಯದಲ್ಲಿ 12 ಬಿ ನಿಯಮಾನುಸಾರ 6 ತಿಂಗಳಿಗೊಮ್ಮೆ ಸಿ.ಎ.ಎಸ್ ಅರ್ಜಿ ಆಹ್ವಾನಿಸಲು ಸಭೆಯು ಒಪ್ಪಿದೆ. |
| ವಿಷಯ 35 | ವಿಷಯ ಮತ್ತು ಟಿಪ್ಪಣಿ | ವಿಶ್ವವಿದ್ಯಾಲಯದ ಬಿ. ಎ (ಶಾಸ್ತ್ರಿ) /ಎಂ. ಎ (ಆಚಾರ್ಯ) ಪಾಠ್ಯಕ್ರಮಗಳ ಪರಿನಿಯಮ ಸಿದ್ಧಪಡಿಸುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಬಿ. ಎ (ಶಾಸ್ತ್ರಿ) /ಎಂ. ಎ (ಆಚಾರ್ಯ) ಪಾಠ್ಯಕ್ರಮಗಳಿಗೆ ಇಲ್ಲಿಯವರೆಗೆ ಯಾವುದೇ ನಿರ್ದಿಷ್ಟ ಪರಿನಿಯಮ ಇರುವುದಿಲ್ಲ. ಇದರಿಂದ ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಅನನುಕೂಲವಾಗಬಹುದಾಗಿರುತ್ತದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ವಿಶ್ವವಿದ್ಯಾಲಯದ ಬಿ. ಎ (ಶಾಸ್ತ್ರಿ) /ಎಂ. ಎ (ಆಚಾರ್ಯ) ಕೋರ್ಸ್‌ಗಳಿಗೆ ಪರಿನಿಯಮವನ್ನು ಸಿದ್ಧಪಡಿಸಬೇಕಿದೆ. ಈ ಸಂಬಂಧ ಸಭೆಯ ಅನುಮತಿಗಾಗಿ ವಿಷಯ ಮಂಡಿಸಲಾಗಿದೆ. |
| | ನಿರ್ಣಯ | ವಿಶ್ವವಿದ್ಯಾಲಯದ ಬಿ. ಎ (ಶಾಸ್ತ್ರಿ) /ಎಂ. ಎ (ಆಚಾರ್ಯ) ಪಾಠ್ಯಕ್ರಮಗಳ ಪರಿನಿಯಮ ಸಿದ್ಧಪಡಿಸುವ ಬಗ್ಗೆ ಈಗಾಗಲೇ ಕಡತದಲ್ಲಿ ಅನುಮೋದನೆ ಪಡೆಯಲಾಗಿರುವಂತೆ ಸಮಿತಿ ರಚಿಸಲು ಅನುಮತಿಸಲಾಗಿದೆ. |

ಕುಲಪತಿಗಳು (ಪ್ರ)
ಪ್ರೊ. ವಿ. ಗಿರೀಶ್ ಚಂದ್ರ

ಕುಲಸಚಿವರು (ಪ್ರ)
ಪ್ರೊ. ವೀರನಾರಾಯಣ ಎನ್ ಕೆ ಪಾಂಡುರಂಗಿ